
SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –08 ದಿನಾಂಕ : 04–09–2024

## ದಿನಾಂಕ: 04.09.2024 ರ ವಾರದ ಸಭೆಯ ವರದಿ

**ಶಿಕ್ಷಕರ ದಿನಾಚರಣೆ ಅಂಗವಾಗಿ ಕಾರ್ಯಕ್ರಮ – ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಒತ್ತಿರುವ ನಗರದ ಬಿ.ಎಡ್. ಕಾಲೇಜಿನ ಪ್ರಾಂಶುಪಾಲರು, ರಂಗಕರ್ಮಿಗಳು, ಟಿ.ವಿ. ದಾರವಾಹಿ ನಟರು, ಸಿನಿಮಾ ಕ್ಷೇತ್ರದಲ್ಲಿಯೂ ಹೆಸರು ಮಾಡಿರುವಡಾ. ಎನ್.ಕೆ.ಚಿದಾನಂದರವರು ದಿನಾಂಕ:04.09.2024 ರಂದು ನಡೆದ ನಮ್ಮ ವಾರದ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿ, 'ಸಮರ್ಥ ಶಿಕ್ಷಕ ರಾಷ್ಟ್ರ ರಕ್ಷಕ' ವಿಷಯದ ಮೇಲೆ ಮಾತನಾಡಿದರು. ಮುಖ್ಯ ಅತಿಥಿಗಳಾದ ಡಾ.ಚಿದಾನಂದ್, ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು, ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ವೇದಿಕೆಯಲ್ಲಿ ಉಪಸ್ಥಿತರಿದ್ದು ಸಭೆ ಯಶಸ್ವಿಯಾಯಿತು.**




ಅಂದಿನ ಸಭೆಯ ಆರಂಭದಲ್ಲಿ ರೊ.ಮಲ್ಲಿಕಾ ವಿ.ಜೋಯ್ಸ್‌ರವರು ಪ್ರಾರ್ಥನೆಯನ್ನು ಮಾಡಿದರು. ರೊ. ಗಾಯತ್ರಿ ಸುಮತೀಂದ್ರ ಸರ್ವರನ್ನು ಸ್ವಾಗತಿಸಿದರು. ಟಾಕ್‌ಆಫ್ ದಿ ಡೇ ಕಾರ್ಯಕ್ರಮದಲ್ಲಿ ರೊ. ಟಿ.ಕೆ.ಎಂ. ಭಟ್‌ರವರು 'ಶತಮಾನಂ ಭವತಿ' ಎನ್ನುವ ಆಶೀರ್ವಾದ ಪದಗಳ ಭಾವಾರ್ಥವನ್ನು ಸಭಿಕರಿಗೆ ತಿಳಿಸಿದರು. ಹೆಚ್ಚಿನ ಅವಧಿಗೆ ಆರೋಗ್ಯ ಪೂರ್ಣರಾಗಿ ಬದುಕು ಎಂಬುದರ ಅರ್ಥವಾಗಿದ್ದು ಇಲ್ಲಿ ಉಸಿರಾಟದ ಪ್ರಕ್ರಿಯೆ ಮುಖ್ಯ ಅಂಶವಾಗಿದೆ ಎನ್ನುತ್ತಾ ಉದಾಹರಣೆಗಾಗಿ ನಮ್ಮ ಕ್ಲಬ್‌ನ ರೊ.ಬಿ.ಎನ್. ಸತ್ಯನಾರಾಯಣ, ರೊ.ಪಿಡಿಜಿ.ಡಾ.ಪಿ. ನಾರಾಯಣ, ರೊ.ಬಿ.ಎನ್.ವಿಶ್ವೇಂದ್ರ ಮುಂತಾದವರನ್ನು ಹೆಸರಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪ್ರಕಟಣೆ ನೀಡಿದರು. ರೊ.ಎಸ್. ಜಿ ಗೋಪಾಲ್‌ರವರು ಜುಲೈ ತಿಂಗಳೊಳಗೆ ಸದಸ್ಯತ್ವ ಶುಲ್ಕ ಪಾವತಿಸಿದವರಿಗೆ ನೆನಪಿನ ಕಾಣಿಕೆ ಕೊಡಿಸಿದರು. ಕ್ಲಬ್‌ನ ಉಪಾಧ್ಯಕ್ಷರಾದ ರೊ. ವೈ.ವಿ.ವೆಂಕಟರಮಣ ಜೋಯ್ಸ್‌ರವರು ಪದವಿ ಸ್ವೀಕಾರ ಸಮಾರಂಭದ ಸಂದರ್ಭದಲ್ಲಿ ವಿದೇಶದಲ್ಲಿದ್ದುದರಿಂದ ಹಾಜರಾಗಿಲ್ಲದ ಕಾರಣ, ಅವರಿಗೆ ಉಪಾಧ್ಯಕ್ಷ ಪಿನ್ ತೊಡಿಸಿ, ಅಕ್ಟಿವಿಟಿ ಫೈಲನ್ನು ನೀಡಲಾಯಿತು. ನೂತನವಾಗಿ ಕ್ಲಬ್‌ನ ಸದಸ್ಯರಾಗಲು




ಆಗಮಿಸಿದ ಶ್ರೀ ಯುವರಾಜ್‌ರವರನ್ನು ರೊ.ಎನ್.ವಿ.ಭಟ್‌ರವರು ಪರಿಚಯಿಸಿದರು. ರೊ.ಪಿಡಿಜಿ. ಡಾ. ಪಿ. ನಾರಾಯಣರವರು ಶ್ರೀ ಯುವರಾಜ್‌ರವರಿಗೆ ರೋಟರಿ ಪಿನ್ ತೊಡಿಸಿ, ರೋಟರಿ ಸಾಹಿತ್ಯ ನೀಡಿ, ರೋಟರಿ ಕ್ಲಬ್‌ಗೆ ಬರಮಾಡಿಕೊಂಡರು. ಮುಖ್ಯ ಅತಿಥಿಗಳಾದ ಡಾ.ಎನ್. ಕೆ.ಚಿದಾನಂದರವರನ್ನು ರೊ. ಕಿಶೋರ್ ಶೀರನಾಳಿಯವರು ಸಭೆಗೆ ಪರಿಚಯ ಮಾಡಿಕೊಟ್ಟರು.

ಮುಖ್ಯ ಅತಿಥಿಗಳಾದ ಡಾ.ಎನ್. ಕೆ.ಚಿದಾನಂದರವರು ಮಾತನಾಡುತ್ತಾ ನಗುವಿನಿಂದಲೂ ನಾವು ಹೆಚ್ಚು ಕಾಲ ಬದುಕಬಹುದು ಎಂದು ರೊ.ಟಿ.ಕೆ.ಎಂ. ಭಟ್‌ರವರ 'ಟಾಕ್ ಆಫ್ ದಿ ಡೇ' ಕಾರ್ಯಕ್ರಮಕ್ಕೊಂದು ಅಂಶವನ್ನು ಸೇರಿಸಿದರು. ಶಿಕ್ಷಣಕ್ಕೆ ಸಾಕಷ್ಟು ವ್ಯಾಖ್ಯಾನವೇ ಇದೆ. ಆಧ್ಯಾತ್ಮಿಕ, ಮನುಷ್ಯತ್ವ, ಮನುಷ್ಯರ ಒಳ್ಳೆತನವನ್ನು ಕಾಣುವುದೇ ಶಿಕ್ಷಣದ ಧ್ಯೇಯವಾಗಿದೆ ಎಂದಿದ್ದಾರೆ ಡಾ.ಸರ್ವಪಳ್ಳಿ ರಾಧಾಕೃಷ್ಣನ್‌ರವರು ಎಂದರು. ಅಂತೆಯೇ ಸ್ವಾಮಿ ವಿವೇಕಾನಂದರೂ ಸಹ ಸಮುಚ್ಚಯ ಸರಿಯಾದ ದಾರಿಯಲ್ಲಿ ಬರಬೇಕಾಗಿದೆ ಎಂದು ಹೇಳಿದುದನ್ನು ಉಲ್ಲೇಖಿಸಿದರು.

ನಾವು ಸಾಮಾನ್ಯವಾಗಿ ಒಳ್ಳೆ ಲಾಯರ್ ಬಗ್ಗೆ ಹೇಳಬಹುದು. ಒಳ್ಳೆ ಡಾಕ್ಟರ್ ಬಗ್ಗೆ ಹೇಳಬಹುದು. ಒಳ್ಳೆ ಇಂಜಿನಿಯರ್ ಬಗ್ಗೆ

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 11-09-2024 ಬುಧವಾರ** **ಸಂಜೆ 6:45**

**ಮುಖ್ಯ ಅತಿಥಿ: ಡಾ. ಜಿ. ನಾರಾಯಣಮೂರ್ತಿ**

**ಪ್ರಿನ್ಸಿಪಾಲ್, ನ್ಯಾಷನಲ್ ಫಾರ್ಮಸಿ ಕಾಲೇಜ್, ಶಿವಮೊಗ್ಗ**

**ವಿಷಯ:**

**ಔಷಧ–ಉಪಯೋಗ ಹಾಗೂ ದುಷ್ಪರಿಣಾಮ**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ

ಹೇಳಬಹುದು. ಹಾಗಾದರೆ ಯಾರು ಒಳ್ಳೆಯ ಟೀಚರ್ ಎಂದು ಯಾರಿಗೆ ಹೇಳಬಹುದು ಎಂದು ಪ್ರಶ್ನಿಸಿದರು. ಅದಕ್ಕಾಗಿ ಉತ್ತರಿಸಿದ ನಮ್ಮ ಕೆಲವು ಸದಸ್ಯರು–ಉತ್ತಮ ಶಿಕ್ಷಣ ಕೊಡುವವನು ಮತ್ತು ಮಕ್ಕಳ ಮನಸ್ಸಿನಲ್ಲಿ ಸದಾ ಇರುವವನು. ಮಕ್ಕಳ ಭವಿಷ್ಯವನ್ನು ಸದಾ ಚಿಂತಿಸುವವನು. ಮಕ್ಕಳನ್ನು ಸತ್ಪ್ರಜೆಯನ್ನಾಗಿ ಮಾಡುವವನು. ನಡೆನುಡಿಯಲ್ಲಿ ತಮ್ಮದೇ ಆದ ವ್ಯಕ್ತಿತ್ವವನ್ನು ಹೊಂದಿರುವವನು. ಹೀಗೆ ನಮ್ಮ ಸದಸ್ಯರುಗಳಿಂದ ಬಂದ ಉತ್ತರವನ್ನು ಪಡೆದ ಮುಖ್ಯ ಅತಿಥಿಗಳು, ಮುಂದುವರೆದು ಶಿಕ್ಷಣದಲ್ಲಿ ಎರಡು ಅರ್ಥವಿದೆ. ಒಂದು ಸಂಕುಚಿತ ಅರ್ಥ. ಇನ್ನೊಂದು ವಿಶಾಲವಾದ ಅರ್ಥ. ನೀವು ಅಂಕಪಟ್ಟಿಗೆ ಸೀಮಿತವಾದರೆ ಸಂಕುಚಿತವಾದ ಅರ್ಥ. ವಿಶಾಲವಾದ ಶಿಕ್ಷಣ ಎಂದರೆ, ಹುಟ್ಟಿನಿಂದ ಸಾಯುವವರೆಗೆ ಪಡೆಯುವ ಅನುಭವವೇ ಶಿಕ್ಷಣ ಎಂದರು. ಶಿಕ್ಷಣದಿಂದ ಶಿಕ್ಷಕರನ್ನು ನೋಡಬೇಕು. ಶಿಕ್ಷಕರ ಹತ್ತಿರ ಹೋಗಿ ಕಲಿಯಬೇಕು, ಆದರೆ ಮೇಧಾವಿಗಳ ಬಳಿ ಹೋಗಿ ಅದನ್ನು ಮರೆಯಬೇಕು. ತೆರೆದ ಮನಸ್ಸುಗಳು ವಿದ್ಯಾರ್ಥಿಗಳಿಗಿರಬೇಕು. ಮನುಷ್ಯತ್ವ ಮತ್ತು ಸದ್ಗುಣಗಳ ಹೊರತಾದ ವಿದ್ಯಾಭ್ಯಾಸವಿಲ್ಲ. ನಾವು ಸೀಮಿತವಾಗಿ ಮಕ್ಕಳನ್ನು ಬೆಳೆಸುತ್ತಿದ್ದೇವೆ. ಸತ್ಯ ಮತ್ತು ಅಸತ್ಯಗಳನ್ನು ವಿಂಗಡಿಸುವ ಶಕ್ತಿ ಕಳೆದುಕೊಳ್ಳುತ್ತಿದ್ದೇವೆ. ಇಂದಿನ ದಿನಮಾನದಲ್ಲಿ ಮಕ್ಕಳಿಗೆ ಹೊಡಿಯಬೇಡಿ, ತೀಕ್ಷ್ಣವಾಗಿ ಮಾತನಾಡಬೇಡಿ ಎಂದು ಶಿಕ್ಷಕರಿಗೆ ತಿಳಿಸಲಾಗಿದೆ. ಕೇವಲ ತರಗತಿಯ ಕೋಣೆಗೆ ಸೀಮಿತವಾದವರು ಶಿಕ್ಷಕರಲ್ಲ ಎಂದರು.

ರಾಜಕಾರಣಿ ಸಮಾಜದ ಆಧಾರಸ್ತಂಭ ಆದರೆ ಸಮಾಜವನ್ನು ಕಟ್ಟುವ ಸ್ಥಿತಿಯಲ್ಲಿ ಅವರು ಇಲ್ಲ. ಇಂದಿನ ದಿನಮಾನದಲ್ಲಿ ಒಳಿತನ್ನು ಪ್ರತಿನಿಧಿಸುವವನು ಶಿಕ್ಷಕನಾಗಿದ್ದಾನೆ ಎಂದರು. **‘ತ್ವಮೇವ ಮಾತಾ ಚ ತ್ವಮೇವ ಪಿತಾ, ತ್ವಮೇವ ವಿದ್ಯಾ, ತ್ವಮೇವ ಸರ್ವಂ ಮಮ ದೇವದೇವ’** ಎನ್ನುವಂತೆ ಪುರೋಹಿತರು ಸಮಾಜವನ್ನು ಕಟ್ಟುವಲ್ಲಿ ಸಹಕರಿಸುತ್ತಿದ್ದಾರೆ. ಇವರುಗಳು ಧಾರ್ಮಿಕ ಉಪನ್ಯಾಸಗಳನ್ನು ನೀಡಿ ಜನರ ಮನಸ್ಸಿಗೆ ಮುದ ನೀಡುವವರು. ಪ್ರೆಸ್–ಮುದ್ರಣ ಮಾಧ್ಯಮ ಇಲ್ಲಿ ಅಕ್ಷರಗಳ ಗುಚ್ಚ ನಿರ್ಮಾಣವಾಗುತ್ತವೆ. ಆದರೆ ಇವರುಗಳಿಗೆ ಸಮಾಜವನ್ನು ಕಟ್ಟುವ ಹಂಬಲ ಇರುವುದಿಲ್ಲ. ಅವರುಗಳು ತಪ್ಪುಗಳನ್ನು ವೈಭವೀಕರಿಸುವುದರಲ್ಲಿಯೇ ನಿರತರಾಗಿದ್ದಾರೆ. ಈ ಹಿಂದೆ ಗಾಂಧೀಜಿಯವರು ಪತ್ರಿಕೆಗಳನ್ನೇ ನಂಬಿದ್ದರು ಸಮಾಜದ ಓರೆಕೋರೆಗಳನ್ನು ಅದು ತಿದ್ದುತ್ತದೆ ಎಂಬ ನಿರೀಕ್ಷೆಯೊಂದಿಗೆ. ನಾವು ನಿರೀಕ್ಷೆ ಮಾಡುವುದು ‘ಟಿ’ ಒಂದರಿಂದ ಅದೆಂದರೆ ಟೀಚರ್. ನಮ್ಮೆಲ್ಲಾ ಆಶಯಗಳನ್ನು ಕಳೆದುಕೊಂಡಾಗ ಸಿಗುವವರೇ ಟೀಚರ್. ಅಂಥಹ ಟೀಚರ್‌ಗಳು ಪ್ರಶಸ್ತಿಯ ಬಗ್ಗೆ ಯೋಚಿಸುವುದಿಲ್ಲ. ಈಗ ನಿಜವಾದ ಟೀಚರ್ ಕಳೆದು ಹೋಗಿದ್ದಾರೆ. ಅಂಥವರನ್ನು ಹುಡುಕಬೇಕಾಗಿದೆ ಎಂದರು.

ಸುಮಾರು 60 ವರ್ಷಗಳಿಂದಲೂ ನಮ್ಮ ಮೂಲ ಶಿಕ್ಷಣಕ್ಕೆ ಧಕ್ಕೆಯಾಗಿದೆ. ನಿಜವಾಗಿಯೂ ಶಿಕ್ಷಣವನ್ನು ಯಶಗೊಳಿಸುವಲ್ಲಿ ನಾವು ಸೋಲನ್ನು ಅನುಭವಿಸುತ್ತಿದ್ದೇವೆ. ಈಗ ಆಯುರ್ವೇದ ಮುಂಚೂಣಿಗೆ ಬರಬೇಕು. ಚರಕ, ಸುಶ್ರುತರು ಬರಬೇಕು. ಭವ್ಯಪರಂಪರೆ ಹಾಗೂ ಸಿದ್ಧಾಂತವನ್ನು ಪ್ರತಿಪಾದಿಸಬೇಕು. ರಾಧಾಕೃಷ್ಣನ್, ಸ್ವಾಮಿ ವಿವೇಕಾನಂದರು ಮತ್ತು ಗಾಂಧೀಜಿಯವರು ಕಂಡಂತಹ ದೇಶವನ್ನು ಪುನರ್ ನಿರ್ಮಿಸಬೇಕಾಗಿದೆ ಎಂದರು.

ರೊ.ಎನ್.ವಿ. ಭಟ್‌ರವರು ಮಾತನಾಡಿ, ಶಿಕ್ಷಣದಿಂದ ವಿವೇಕ ಎನ್ನುತ್ತಾರೆ ಎಂಬುದಕ್ಕೆ ಉತ್ತರಿಸಿದ ಅತಿಥಿಗಳು, ಮಕ್ಕಳನ್ನು ಸಂಶೋಧನೆಗಿಳಿಸುವುದೇ ಪ್ರಾಜೆಕ್ಟ್‌ಗಳು. ಮಕ್ಕಳಿಂದ ಉತ್ತರ







ಬರೆಸುವುದಲ್ಲ. ಪ್ರಶ್ನೆಗಳನ್ನು ಬರೆಸಬೇಕು ಎಂದರು. ಈ ಹಿಂದೆ ಉಪಾಧ್ಯಾಯ ವೃತ್ತಿಯನ್ನು ಸಮಾಜ ಸೇವೆ ಎಂದು ಪರಿಗಣಿಸಿದ್ದರು. ಆದರೆ ಈಗ ಅದು ಸಂಬಳಕ್ಕೆ ಸೀಮಿತವಾಗಿದೆ ಎಂದರು.ರೊ. ಗಾಯತ್ರಿ ಸುಮತೀಂದ್ರರವರು ಮಾತನಾಡಿ, ಈಗಿನ ಓದುವಿಕೆಗೂ ನಂತರ ಮಕ್ಕಳು ಮಾಡುವ ಕೆಲಸಕ್ಕೂ ಸಂಬಂಧವಿಲ್ಲದಂತಾಗಿದೆ ಎಂದರು. ರೊ. ಸಿ.ಬಿ.ವೀರಣ್ಣನವರು ಮಾತನಾಡಿ, ‘ನಹಿ ಜ್ಞಾನೇನ ಸದೃಶಂ’ ಎನ್ನುವಂತೆ ಟೀಚರ್‌ಗಳು ಸರಿಯಾಗಿ ಪಾಠ ಮಾಡಲಾಗುತ್ತಿಲ್ಲ. ಏಕೆಂದರೆ ಒಂದು ಸರ್ಕಾರವಿದ್ದಾಗ ಒಂದು ಪಾಠದ ಸಿಲಬಸ್, ಇನ್ನೊಂದು ಸರ್ಕಾರ ಬಂದಾಗ ಇನ್ನೊಂದು ಸಿಲಬಸ್ ಹೀಗೆ ಅವರುಗಳಿಗೇ ಗೊಂದಲವಾಗಿದೆ ಎಂದರು. ಶಿಕ್ಷಣವನ್ನು ರಾಜಕೀಯದಿಂದ ದೂರವಿಡಿ. ಮೌಲ್ಯಯುಕ್ತ ಪಾಠ ಮಾಡಿರಿ ಎಂದರು. ಕೊನೆಯದಾಗಿ ಮುಖ್ಯ ಅತಿಥಿಗಳು ಮಾತನಾಡಿ, ಈಗ ಲಿವಿಂಗ್‌ಟುಗೆದರ್ ಮತ್ತು ಚೈಲ್ಡ್ ಪ್ರೆಗ್ನೆನ್ಸಿಯಂಥಹ ಪ್ರಸಂಗಗಳು ಬದಲಾದ ಶಿಕ್ಷಣದ ವ್ಯತಿರಿಕ್ತಗಳು ಎಂದರು.

ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ಮಾತನಾಡಿ, ಶ್ರೇಷ್ಠ ಶಿಕ್ಷಕ ಹೇಗಿರಬೇಕೆಂಬುದರ ಕಲ್ಪನೆಯನ್ನು ಕಟ್ಟಿಕೊಟ್ಟ ಡಾ. ಚಿದಾನಂದರವರಿಗೆ ಕೃತಜ್ಞತೆ ಅರ್ಪಿಸಿದರು. ಇವರನ್ನು ರೊ. ಬಿ.ಎನ್. ಸತ್ಯನಾರಾಯಣ, ರೊ.ಟಿ.ಆರ್. ಅಶ್ವಥನಾರಾಯಣ್, ರೊ.ಎನ್.ವಿ.ಭಟ್ ಮತ್ತು ಅಧ್ಯಕ್ಷರು ಕಾರ್ಯದರ್ಶಿಗಳು ಸೇರಿ ಸನ್ಮಾನಿಸಿದರು.

ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಕೊನೆಯಲ್ಲಿ ವಂದನಾರ್ಪಣೆ ಮಾಡುತ್ತಾ ಜಪಾನ್‌ದೇಶದಲ್ಲಿರುವ ಶಿಕ್ಷಣದ ವ್ಯವಸ್ಥೆ ಮತ್ತು ಶಿಕ್ಷಕರಿಗೆ ನೀಡುವ ಆದರದ ಬಗ್ಗೆ ತಿಳಿಸಿದರು ಮತ್ತು ಆಗಮಿಸಿದ್ದ ಸರ್ವರನ್ನು ವಂದಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಕೊನೆಯಾಗಿ ರೊ. ವೈ.ವಿ. ವೆಂಕಟರಮಣ ಜೋಯ್ಸರವರ ಭಾರತ್ ಮಾತಾಕಿ ಜೈ ಘೋಷಣೆಯೊಂದಿಗೆ ಸಭೆ ಸಮಾಪ್ತಿಯಾಯಿತು.






ಕೊಲ್ಕತ್ತಾದಲ್ಲಿ ನಡೆದ ವೈದ್ಯೆ ಹತ್ಯೆ ಪ್ರಕರಣವನ್ನು ಖಂಡಿಸಿ ಶಿವಮೊಗ್ಗದ ಎಲ್ಲಾ ರೋಟರಿ ಕ್ಲಬ್ ಹಾಗೂ ಇನ್ನರ್‌ವ್ಹೀಲ್ ಕ್ಲಬ್‌ಗಳು ಒಟ್ಟಾಗಿ **'SILENT PROTEST MARCH'** ನಡೆಸಿ ನ್ಯಾಯ ಒದಗಿಸಲು ಡಿಸಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.








ದಿನಾಂಕ: 2-9-2024 ರಂದು ಭಾರತೀಯ ವಿದ್ಯಾ ಭವನ ಶಾಲೆಯಲ್ಲಿ ಇಂಟರ್ಯಾಕ್ಟ್ ಕ್ಲಬ್ ಪದವಿ ಸ್ವೀಕಾರ ಸಮಾರಂಭ ನಡೆಯಿತು. ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿ ರೊ. ಎನ್.ಜಿ. ಉಷಾ, ರೊ. ವೀರಣ್ಣ ಎ. ಹುಗ್ಗಿ, ರೊ. ಟಿ. ಆರ್. ಅಶ್ವತ್ಥ ನಾರಾಯಣ್ ರೊ. ಎನ್.ವಿ. ಭಟ್, ರೊ. ಗಾಯತ್ರಿ ಸುಮತೀಂದ್ರ ರೊ. ವೆಂಕಟರಮಣ ಹೆಗಡೆ ಭಾಗವಹಿಸಿದ್ದರು.

## August - 2024-25, Meetings and Projects

| | |
|---|---|
| 1) 1-8-2024 | Interact Club Installation in Jnanadeepa School |
| 2) 2-8-2024 | Interact Club Installation in Sri Manjunathashwara High School, Kumsi |
| 3) 2-8-2024 | Interact Club Installation in Government Junior College, Kumsi |
| 4) 4-8-2024 | Orientation for New Members |
| 5) 6-8-2024 | Interact Club Installation in Mary Imaculate Girls High School |
| 6) 7-8-2024 | 6th Weelky Meeting Guest Dr. Nagaraj Parisara |
| 7) 12-8-2024 | II BOD Meeting |
| 8) 13-8-2024 | Distribution of School Uniform in Veena Sharada High School |
| 9) 13-8-2024 | Interact Club Installation in Karnataka Pulic School, Gajanur |
| 10) 14-8-2024 | 7th Weekly Meeting Club Assembly |
| 11) 15-8-2024 | Independence Day Clebration in Youth Centre and Asha Kirana School. All so tree Planting. |
| 12) 17-8-2024 | Ist Zonal Review Meeting in our Youth Centre Hosting by our Rotary Club |
| 13) 21-8-2024 | 8th Weekly Meeting Guest Speaker JC Soumya Aralappa |
| 14) 22-8-2024 | Interact Club Installation in Tunga High School Bapuji Nagar & Training on - Goals of Education |
| 15) 23-8-2024 | Interact Club Installation in National High School - Balarajurs Road, & Training on - Traffic Rules |
| 16) 23-8-2024 | Interact Club Installation in Vasavi Public School |
| 17) 25-8-2024 | Training Program for Primary School Teachers - Bala Gokula |
| 18) 27-8-2024 | Interact Club Installation in National High School, B.R. Project & Training on -Concentration Technics, Lecture on - Trafic Rules |
| 19) 28-8-2024 | 9th Week - Family Meet Program Theme- 'ಮೇರಾ ಭಾರತ್ ಮಹಾನ್' Cultural Programs |

**24th and 25th August- 36 Members of our Club Participated in District Seminar - 'Pragathi'**

## Duties of the Rotarian,

1. 100% Attendacne and 100% Participation
2. Timely dues payment
3. Accept Assignments
4. Develop above Club Level

- Rtn. TKM Bhat



## ಸಂಪಾದಕೀಯ

### 'ಅನ್ನದೇವರ' ಮರೆತವರು

ನಮ್ಮ ದೇಶದಲ್ಲಿ ಒಬ್ಬ ನಾಗರೀಕನಿಗೆ ಸಿಗಬೇಕಾದ ಕನಿಷ್ಠ ಆಹಾರದ ಸಂಪನ್ಮೂಲ ಸರ್ಕಾರದ ಬಳಿ ಇದ್ದರೂ ಅದನ್ನು ಅರ್ಹರಿಗೆ ತಲುಪಿಸುವಲ್ಲಿ ವ್ಯವಸ್ಥೆ ವಿಫಲವಾಗುತ್ತಿದೆ. ಆಹಾರ ವಿತರಣೆಯಲ್ಲಿನ ಗೊಂದಲ, ಪಡಿತರ ಚೀಟಿಯ ಅಲಭ್ಯ. ಅಪೌಷ್ಟಿಕತೆ ಹೆಚ್ಚಳ, ಶಿಶು ಮರಣ ಪ್ರಮಾಣ ಹೆಚ್ಚಳದಂತಹ ಸಂಗತಿಗಳು ಮಾಧ್ಯಮಗಳಲ್ಲಿ ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ. ಅಪೌಷ್ಟಿಕತೆಗೂ ಆಹಾರದ ಪೋಲಿಗೂ ನೇರವಾದ ಸಂಬಂಧ ಇರುವುದನ್ನು ಅಧ್ಯಯನ ವರದಿಗಳು ದೃಢಪಡಿಸಿವೆ.

ಆತ್ಮೀಯರೊಬ್ಬರ ಮದುವೆ ಸಮಾರಂಭಕ್ಕೆ ಹೋಗಿದ್ದೆ. ಅದೊಂದು ವೈಭವೋಪೇತ ಮದುವೆ. ಭರ್ಜರಿ ಭೂರಿ ಭೋಜನ. ಸ್ವಾಗತ ಪೇಯ, ಕುರುಕಲು ತಿಂಡಿ, ಹತ್ತು ಹಲವು ತರಹದ ಭಕ್ಷ್ಯ ಭೋಜ್ಯಗಳು. ಇನ್ನು ಊಟದ ಮೇಜಿನ ಮೇಲಂತು ಬಗೆಬಗೆಯ ಸಿಹಿ, ಖಾರದ ಖಾದ್ಯ, ಪೇಯಗಳು, ತಿನ್ನಲು ಬಹು ಆಯ್ಕೆಗಳಿದ್ದ ಈ ಅವಕಾಶದಲ್ಲಿ, ಯಾವುದು ತಿಂದು ಯಾವುದು ಬಿಡಲಿ ಎಂಬ ಹಪಹಪಿಯಿಂದ ಎಲ್ಲರು ತಮ್ಮ ತಮ್ಮ ತಟ್ಟೆಯಲ್ಲಿ ಅರ್ಧದಷ್ಟು ಊಟವನ್ನು ಪೋಲು ಮಾಡಿದ್ದರು. ಇದನ್ನು ನೋಡಿ ಬಲು ಬೇಸರವಾಯಿತು. ಬರೀ ಮದುವೆ, ಗೃಹಪ್ರವೇಶ, ನಾಮಕರಣದ ಸಂಭ್ರಮದಲ್ಲಷ್ಟೇ ಅಲ್ಲ, ಬಹುತೇಕ ದೊಡ್ಡ ದೊಡ್ಡ ಹೋಟೆಲುಗಳಲ್ಲೂ ಈ ರೀತಿ ಅರೆಬರೆ ತಿಂದು ಎದ್ದು ಹೋದವರ ತಟ್ಟೆಗಳನ್ನು ನಾವು ದಿನನಿತ್ಯ ನೋಡುತ್ತೇವೆ.

ಇತ್ತೀಚೆಗೆ ಜರ್ಮನಿಗೆ ಪ್ರವಾಸಕ್ಕೆ ಹೋಗಿ ಬಂದ ನನ್ನ ಗೆಳೆಯ ತನ್ನ ಅನುಭವಗಳನ್ನು ಹಂಚಿಕೊಳ್ಳುತ್ತ, ಅಲ್ಲಿಯ ಹೋಟೆಲುಗಳಲ್ಲಿ ನಾವು ತಟ್ಟೆಯಲ್ಲಿ ಆಹಾರವನ್ನೇನಾದರೂ ಉಳಿಸಿದರೆ ಅದಕ್ಕೆ ದಂಡ ತೆರಬೇಕಾಗುತ್ತದೆ ಎಂದು ಹೇಳಿದ್ದು ಕೇಳಿ ಒಂದು ಕ್ಷಣ ದಂಗಾಗಿದ್ದೆ. ಆಹಾರ ಪೋಲು ಮಾಡುವುದನ್ನು ತಡೆಯಲು ಇದೊಂದು ಒಳ್ಳೆಯ ಉಪಾಯವಲ್ಲವೇ ಎಂದು ಯೋಚಿಸುವಂತಾಯಿತು.

ನಾವು ನೀವೆಲ್ಲಾ ಪ್ರತಿದಿನ ಬೆಳಗ್ಗೆ ಎದ್ದು ಒಂದು ಲೋಟ ಕಾಫಿ ಸೇವಿಸುವುದರ ಹಿಂದೆ ಒಬ್ಬ ಕಬ್ಬು ಬೆಳೆಗಾರ, ಕಾಫಿ ಬೆಳೆಗಾರ, ಹಾಲು ವ್ಯಾಪಾರಿಯ ಶ್ರಮದ ಅಖಂಡ ತಪಸ್ಸಿನ ಫಲವಿರುತ್ತದೆ. ನಮ್ಮ ಸುತ್ತಮುತ್ತ ಬದುಕುವ ಪ್ರಾಣಿ ಪಕ್ಷಿಗಳು ಎಂದೂ ತಮ್ಮ ಆಹಾರವನ್ನು ವೃಥಾ ಪೋಲು ಮಾಡುವುದಿಲ್ಲ ಎಂಬುದು ಸುಮ್ಮನೆ ಗಮನಿಸಿದರೆ ತಿಳಿಯುತ್ತದೆ. ತಮ್ಮ ಹೊಟ್ಟೆ ಹಸಿಯದೆ ಹುಲಿ, ಸಿಂಹ, ಚಿರತೆಯೂ ಬೇಟೆಗೆ ಇಳಿಯುವುದಿಲ್ಲ.

ಇತ್ತೀಚೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ರಾಜಕೀಯ ಸಮಾವೇಶವೊಂದರಲ್ಲಿ ಉಳಿದ ಆಹಾರವನ್ನು ಬೀದಿಗೆ ಚೆಲ್ಲುತ್ತಿದ್ದ ದೃಶ್ಯವೊಂದನ್ನು ಪತ್ರಿಕೆಯಲ್ಲಿ ನೋಡಿದೆವು. ಸರಳ ಸಾಮಾಜಿಕ ಜೀವನಕ್ಕೆ ಮೇಲ್ಪಂಕ್ತಿ ಹಾಕಬಹುದಾದ ಜನಪ್ರತಿನಿಧಿಗಳೇ ಇಂತಹ ಅಪಸವ್ಯಗಳಲ್ಲಿ ವ್ಯಸ್ತರಾದರೆ ಜನಸಾಮಾನ್ಯರಿಗೆ ತಲುಪಿಸುವ ಸಂದೇಶವಾದರೂ ಎಂತಹದ್ದು?

'ಅನ್ನ ದೇವರ ಮುಂದೆ ಬೇರೆ ದೇವರಿಲ್ಲ' ಎಂದು ಸರ್ವಜ್ಞ ಸಾರಿದ. ಇಂದಿಗೂ ಕೆಲವೆಡೆ ಸಾರ್ವಜನಿಕ ಭೋಜನ ಸೇವನೆ ಮಾಡುವಾಗ ಅನ್ನ ದೇವರಿಗೆ ಪ್ರಾರ್ಥನೆ ಮಾಡಿ ಕೈ ಮುಗಿದು ಊಟ ಮಾಡುತ್ತೇವೆ. ದೇವಸ್ಥಾನಗಳಲ್ಲಂತೂ ಊಟವನ್ನು 'ಪ್ರಸಾದ' ಎಂದೇ ಸ್ವೀಕರಿಸುತ್ತೇವೆ. ನೈತಿಕತೆಯಲ್ಲಿ ಬದುಕುವ ನಾವೆಲ್ಲಾ ಆಹಾರ ಪೋಲು ಮಾಡುವುದರಲ್ಲೂ ಹಿಂದೆ ಬಿದ್ದಿಲ್ಲ ಎನ್ನುವುದೊಂದು ದುರಂತ.

ಪ್ರತಿ ಅನ್ನದ ಅಗುಳಿನ ಮೇಲೆ ತಿನ್ನುವವನ ಹೆಸರು ಬರೆಯಲಾಗಿರುತ್ತದಂತೆ. ನಮ್ಮಲ್ಲಿ ಕೊಳ್ಳುವ ಶಕ್ತಿ ಇದ್ದ ಮಾತ್ರಕ್ಕೆ ಇನ್ನೊಬ್ಬರ ಆಹಾರವನ್ನು ಕಿತ್ತುಕೊಳ್ಳುವ ಯಾವ ಅಧಿಕಾರವೂ ನಮಗೆ ಇರುವುದಿಲ್ಲ.

ರೋಟರಿಯಂತಹ ಸಂಸ್ಥೆಗಳಲ್ಲಿ ಕೆಲಸಮಾಡುವ ನಾವು ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕಿದೆ ಅಲ್ಲವೇ ?

• ರೊ. ಎಂ. ಮಾಧವಾಚಾರ್

*** ಗಮನಿಸಿ ***

**ನಮ್ಮ ಕ್ಲಬ್ ವಾರ ಪತ್ರಿಕೆ ವಿಶ್ವಮಿತ್ರದಲ್ಲಿ ಪ್ರಕಟಣೆಗಾಗಿ ಸದಸ್ಯರು ಲೇಖನಗಳನ್ನು, ಜಾಹೀರಾತುಗಳನ್ನು ಕಳುಹಿಸಬಹುದು. ಅಧ್ಯಕ್ಷರು ಅಥವಾ ಕಾರ್ಯದರ್ಶಿಗೆ ಕಳಿಸಿ. ಸೂಕ್ತವಾದುದನ್ನು ಪ್ರಕಟಿಸಲಾಗುವುದು.**

## ಕಗ್ಗದ ಪರಿಮಳ ನಿಮಗಾಗಿ

**ಮನಸ್ಸಿಗೂ ಬುದ್ಧಿಗೂ ಯಾವುದು ವ್ಯಾಯಾಮ?**
**ಪರಿಪರಿಪರೀಕ್ಷೆಗಳು ಪರಿಭವದ ಶಿಕ್ಷೆಗಳು**
**ಗರಡಿಯ ವ್ಯಾಯಾಮ ಮನ ಬುದ್ಧಿಗಳಿಗೆ।**
**ಪುರುಷತೆಗೆ ಪೆಟ್ಟುಗಳನಾದ ಗಂತಿಯೆ ವಿಜಯ**
**ಬಿರಿದ ನನೆ ಫಲಕೆಮನೆ ಮಂಕುತಿಮ್ಮ॥**

ನಾನಾ ರೀತಿಯ ಪರೀಕ್ಷೆಗಳು, ಸೋಲಿನ ಶಿಕ್ಷೆಗಳು, ಮನಸ್ಸು ಬುದ್ಧಿಗಳಿಗೆ ಗರಡಿಯ ವ್ಯಾಯಾಮವಿದ್ದ ಹಾಗೆ. ಪೌರುಷಕ್ಕೆ ಪೆಟ್ಟುಗಳಿಂದ ಉಂಟಾದ ಗಡ್ಡೆಯೆ ಜಯ. ಮೊಗ್ಗು ಬಿರಿದಾಗ ಅದು ಹಣ್ಣಿಗೆ ಮನೆಯಾಗುತ್ತದೆ.

ಜೀವಿ ಭೂಲೋಕಕ್ಕೆ ಬಂದ ತಕ್ಷಣ ಅವನ ಬದುಕಿನ ಪುಟಗಳು ಒಂದೊಂದೆ ತೆರೆದುಕೊಳ್ಳುತ್ತವೆ. ಹಗಲು ರಾತ್ರಿಗಳಂತೆ ಸಂಜೆ ಉಷೆಗಳಂತೆ ಕಷ್ಟ ಸುಖಗಳು ಬದುಕಿನುದ್ದಕ್ಕೂ ಹಾದು ಹೋಗುತ್ತಿರುತ್ತವೆ. ನಾನಾ ರೀತಿಯ ಪರೀಕ್ಷೆಗಳನ್ನು, ಸೋಲಿನ ಶಿಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಸಂಪೂರ್ಣವಾಗಿ ಸುಖವನ್ನೇ ಅನುಭವಿಸಿದ ಅಥವಾ ಸಂಪೂರ್ಣವಾಗಿ ಕಷ್ಟವನ್ನೇ ಅನುಭವಿಸಿದ ಜೀವಿ ಎಲ್ಲೂ ಕಾಣಸಿಗುವುದಿಲ್ಲ. ಮಾನ್ಯ ಗುಂಡಪ್ಪನವರು ಇಂತಹ ಕಷ್ಟಗಳು ಸೋಲುಗಳು ಮನುಷ್ಯನಿಗೆ ಜೀವನದಲ್ಲಿ ಒಳ್ಳೆಯ ಪಾಠ ಕಲಿಸಿ, ವಿವೇಕಿಯನ್ನಾಗಿ ಮಾಡುತ್ತವೆ ಎಂದು ಅಭಿಪ್ರಾಯ ಪಡುತ್ತಾರೆ. ಅವು ಮನುಷ್ಯನ ಮನಸ್ಸಿಗೆ ಹಾಗೂ ಬುದ್ಧಿಗೆ ವ್ಯಾಯಾಮವನ್ನು ನೀಡಿಗಟ್ಟಿ ಮಾಡುತ್ತವೆ. ಪೌರುಷಕ್ಕೆ ಆಗಾಗ್ಗೆ ಬೀಳುವ ಪೆಟ್ಟುಗಳು ಅವನನ್ನು ಸರಿಯಾದ ರೀತಿಯಲ್ಲಿ ಬದುಕಿಗೆ ತಯಾರು ಮಾಡುತ್ತವೆ. ಆ ಗಟ್ಟಿತನವೇ ಮುಂದೆ ಜೀವನದಲ್ಲಿ ಯಶಸ್ಸು ಪಡೆಯಲು ತಳಹದಿಯಾಗುತ್ತದೆ. ಮೊಗ್ಗು ತಾನು ಬಿರಿಯಲಾರೆ ಎಂದು ಹಾಗೇ ಕುಳಿತರೆ ಮುಂದೆ ಅದು ಹಣ್ಣಿಗೆ ಮನೆಯಾಗದು. ಬದುಕಿನಲ್ಲಿ ಕಷ್ಟಗಳಿಗೂ ತನ್ನದೇ ಆದ ಮಹತ್ವವಿರುತ್ತದೆ. ಮೊಟ್ಟೆಯಿಂದ ಹೊರಬರಬೇಕಾದರೆ ಚಿಟ್ಟೆ ಅದೆಷ್ಟು ಹೆಣಗಾಡುತ್ತದೆ! ಆ ಒದ್ದಾಟದಿಂದಲೇ ಗಟ್ಟಿತನವನ್ನು ಪಡೆದು, ಹಾರಲು ಶಕ್ತವಾಗುತ್ತದೆ. ಆದರೆ ಆ ಮೊಟ್ಟೆಯನ್ನು ಒಡೆದು ಅದಕ್ಕೆ ಹೊರಬರಲು ಅನುವು ಮಾಡಿಕೊಟ್ಟರೆ ಅದು ಅಲ್ಲಿಯೇ ಕೆಳಕ್ಕೆ ಬಿದ್ದು ಸತ್ತುಹೋಗುತ್ತದೆ. ಆದ್ದರಿಂದ ನಮಗೆ ಕಷ್ಟಗಳು ಬಂದಾಗ ನಾವು ಜೀವನದಲ್ಲಿ ಸೋಲನ್ನು ಅನುಭವಿಸಿದಾಗ ನಾವೆಂದೂ ಕುಗ್ಗಿ ಹೋಗಬಾರದು. ಅದೊಂದು ನಮ್ಮ ಜೀವನಕ್ಕೆ ತರಬೇತಿ ಎಂದು ತಿಳಿದರೆ ಸಾಕು. ಸಕಲ ಜಯದ ಮೂಲವೂ ಅದೇ ಎಂದು ತಿಳಿಯಬೇಕು.

**ಚಿಂತನ**

**ನಗುವು ನಮ್ಮ ಮುಖದ ಮೌಲ್ಯ ಹೆಚ್ಚಿಸಿದರೆ**
**ಪ್ರೀತಿ ನಮ್ಮ ಹೃದಯದ ಮೌಲ್ಯ ಹೆಚ್ಚಿಸುತ್ತದೆ.**
**ಗೌರವ ನಮ್ಮ ನಡತೆಯ ಮೌಲ್ಯ ಹೆಚ್ಚಿಸಿದರೆ**
**ಸ್ನೇಹಿತರು ಮತ್ತು ಕುಟುಂಬ ನಮ್ಮ ಬದುಕಿನ ಮೌಲ್ಯ ಹೆಚ್ಚಿಸುತ್ತಾರೆ.**
**ಸ್ನೇಹಿತರಿಗಾಗಿ, ಕುಟುಂಬದವರಿಗಾಗಿ ಸ್ವಲ್ಪ ಸಮಯ ನೀಡೋಣ.**
**ಸದಾ ಕಾಲ ಸಂತೋಷದಿಂದ ನಗುನಗುತಾ ಬಾಳೋಣ.**

**– ರೊ. ಎನ್.ಜಿ. ಉಷಾ**

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495